ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 125(415)

ಶ್ರೀ ಸಾದತ್ ಅಲಿಖಾನ್(ಚನ್ನಪಟ್ಟಣ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ)ಚನ್ನಪಟ್ಟಣ ತಾಲ್ಲೂಕಿನಲ್ಲಿ ಮಣ್ಣು ಆರೋಗ್ಯ ಕೇಂದ್ರವನ್ನು ತೆರೆಯಲು ಸರ್ಕಾರದ ಮುಂದೆ ಯಾವುದಾದರೂ ಪ್ರಸ್ತಾವನೆ ಇದೆಯೇ.

ಆ)ಹಾಗಿದ್ದಲ್ಲಿ, ಇದು ಯಾವಾಗ ತೆರೆಯಲಾಗುವುದು?

ಶ್ರೀ ಎನ್ ಹುಚ್ಚಮಾಸ್ತಿಗೌಡ (ಕೃಷಿ ಸಚಿವರು)

ಇಲ್ಲ

ಉದ್ಭವಿಸುವುದಿಲ್ಲ

ಶ್ರೀ ಸಾದತ್ ಅಲಿಖಾನ್ : ಮಾನ್ಯ ಅಧ್ಯಕ್ಷರೆ, ಚನ್ನಪಟ್ಟಣ ತಾಲ್ಲೂಕಿನಲ್ಲಿ ಮಣ್ಣು ಪರೀಕ್ಷಾ ಕೇಂದ್ರವನ್ನು ತೆರೆಯಬೇಕೆಂದು ಮಾನ್ಯ ಸಚಿವರು ಚನ್ನಪಟ್ಟಣಕ್ಕೆ ಸಭೆಯೊಂದರಲ್ಲಿ ಭಾಗವಹಿಸಲು ಬಂದಿದ್ದಾಗ ಒಂದು ಮನವಿ ಪತ್ರವನ್ನು ಕೊಟ್ಟಿದ್ದೆ. ಅದೇ ರೀತಿ ಅಲ್ಲಿ ಮಣ್ಣು ಪರೀಕ್ಷಾ ಕೇಂದ್ರವನ್ನು ತೆರೆಯುವುದಾಗಿ ಪ್ರಮಾಣ ಮಾಡಿದ್ದಿರಿ. ಇದಕ್ಕೆ ಖರ್ಚು ಸಹ ಜಾಸ್ತಿಯಾಗುವುದಿಲ್ಲ. ಈಗ 6,000 7,000 ಸಾಯಿಲ್ ಟೆಸ್ಟಿಂಗ್ ಸ್ಯಾಂಪಲ್‌ಗಳು ಬೆಂಗಳೂರಿಗೆ ಬರುತ್ತಿದೆ. ಆದುದರಿಂದ, ಚನ್ನಪಟ್ಟಣದಲ್ಲಿರುವ ಕೃಷಿ ಇಲಾಖೆಯಲ್ಲಿಯೇ ಮಣ್ಣು ಪರೀಕ್ಷಾ ಕೇಂದ್ರವನ್ನು ತೆರೆಯಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಅಧ್ಯಕ್ಷರೇ, ಪ್ರತಿಯೊಂದು ಜಿಲ್ಲಾ ಕೇಂದ್ರದಲ್ಲೂ ಒಂದೊಂದು ಮಣ್ಣು ಪರೀಕ್ಷಾ ಕೇಂದ್ರವಿದೆ. ಇದರ ಜೊತೆಗೆ ಸಂಚಾರಿ ಮಣ್ಣು ಪರೀಕ್ಷಾ ಕೇಂದ್ರ ಸಹ ಇದೆ. ಇವೆರಡು ಇರುವಂಥ ಸಂದರ್ಭದಲ್ಲಿ ಇದರ ಅವಶ್ಯಕತೆ ಇನ್ನೂ ಎಷ್ಟು ಬೇಕಾಗುತ್ತದೆಂದು ತಿಳಿದುಕೊಂಡು ಕೂಡಲೇ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸುತ್ತೇನೆ, ನಾನು ಏನು ಯೋಚನೆ ಮಾಡಿದ್ದೇನೆಂದರೆ, ಮಣ್ಣು ಪರೀಕ್ಷಾ ಕೇಂದ್ರವನ್ನು ರೆವಿನ್ಯೂ ಸಬ್ ಡಿವಿಜನ್‌ಗೊಂದರಂತೆ ತೆರೆಯುವುದು ಅವಶ್ಯಕವೇ ಎಂಬುದನ್ನೂ ಸಹ ತಿಳಿದುಕೊಂಡು ಇನ್ನೂ ಹೆಚ್ಚು ಮಣ್ಣು ಪರೀಕ್ಷಾ ಕೇಂದ್ರಗಳನ್ನು ತೆರೆಯುವ ಅವಶ್ಯಕತೆ ಕಂಡುಬಂದರೆ ಇದರ ಬಗ್ಗೆ ಆದಷ್ಟು ಬೇಗ ಕ್ರಮ ತೆಗೆದುಕೊಳ್ಳವ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ಕಾಲ ಮುಗಿಯಿತು.

ವಿಷಯ : - ಬಸವಕಲ್ಯಾಣ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವ ಬಗ್ಗೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 126(543)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್(ಬಸವಕಲ್ಯಾಣ)

ವಿಷಯ : - ಬಸವಕಲ್ಯಾಣ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸುವ ಬಗ್ಗೆ.

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ)ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ ಮಳೆ ಬಾರದೆ ಬರಗಾಲಕ್ಕೆ ತುತ್ತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ)ಹಾಗಿದ್ದಲ್ಲಿ,ಇಲ್ಲಿಯವರೆಗೆ ಬರಗಾಲ ಕಾಮಗಾರಿಗಳನ್ನು ಕೈಗೊಳ್ಳಲು ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

(ಇ)ಬಸವ ಕಲ್ಯಾಣ ತಾಲ್ಲೂಕನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಲಾಗಿದೆಯೇ?

(ಈ)ಬಸವಕಲ್ಯಾಣ ತಾಲ್ಲೂಕಿನಲ್ಲಿ ಸರಾಸರಿ ಬಿದ್ದಿರುವ ಮಳೆಯ ಪ್ರಮಾಣವೆಷ್ಟು?

(ಉ)ಅಲ್ಲಿ ಕುಡಿಯುವ ನೀರಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ರಾಜಶೇಖರಮೂರ್ತಿ(ಕಂದಾಯ ಸಚಿವರು).

ಹೌದು

ಅಭಾವ ಪರಿಹಾರ ಕಾರ್ಯಕ್ರಮದಡಿಯಲ್ಲಿ ಕುಡಿಯುವ ನೀರಿನ ಪೂರೈಕೆಗಾಗಿ ಬಸವಕಲ್ಯಾಣ ತಾಲ್ಲೂಕಿಗೆ ರೂ.24.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಮುಂಗಾರು ಫಸಲಿನ ಆಣೆವಾರಿಯನ್ನು ನಿರ್ಧರಿಸಿದ ನಂತರ ಈ ಬಗ್ಗೆ ಪರಿಶೀಲಿಸಲಾಗುವುದು.

ಬಸವಕಲ್ಯಾಣ ತಾಲ್ಲೂಕಿನಲ್ಲಿ ಬಿದ್ದ ಮಳೆಯ ಪ್ರಮಾಣ ಈ ಕೆಳಕಂಡಂತಿದೆ:

ತಿಂಗಳು	ವಾಡಿಕೆ ಮಳೆ	ಬಿದ್ದಮಳೆ
ಜೂನ್	84.0	25.8
ಜುಲೈ	136.3	141.8
ಆಗಸ್ಟ್	145.7	57.1

(೧೯.೮.೯೩ರ
ವರೆಗೆ)

ಸದರಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಅಭಾವ ನೀಗಿಸಲು ಪ್ರಸ್ತುತ ಸಾಲಿನಲ್ಲಿ ಇಲ್ಲಿಯವರೆಗೆ 43ಕೊಳವೆ ಬಾವಿಗಳಿಗೆ ಮಂಜೂರಾತಿ ನೀಡಲಾಗಿದೆ. ತೋಡಲಾಗಿರುವ 39 ಕೊಳವೆ ಬಾವಿಗಳ ಪೈಕಿ 35 ಕೊಳವೆ ಬಾವಿಗಳು ಸಫಲವಾಗಿರುತ್ತವೆ. ಅಲ್ಲದೇ, 7 ಕಿರುನೀರು ಸರಬರಾಜಿಗೆ ರಿವೈವಲ್ ಮಾಡಲಾಗಿದೆ. 4 ಪವರ್ ಮೋಟಾರ್ ಅಳವಡಿಸಿದ ಬೋರ್‌ವೆಲ್‌ಗಳನ್ನು ರಿವೈವಲ್ ಮಾಡಲಾಗಿದೆ.

ಒಂದು ಬಾವಿಯಿಂದ ಹೂಳು ತೆಗೆಸಲಾಗಿದೆ. 7 ಬೋರ್‌ವೆಲ್‌ಗಳಿಗೆ ಪವರ್‌ಪಂಪ್ ಅಳವಡಿಸಲಾಗಿದೆ. ಒಂದು ಪೈಪ್‌ಲೈನ್ ಅಳವಡಿಸಲಾಗಿದೆ. ಈ ಎಲ್ಲಾ ಕಾಮಗಾರಿಗಳಿಗೆ ಸರ್ಕಾರ ರೂ.24.00 ಲಕ್ಷಗಳನ್ನು ಮಂಜೂರು ಮಾಡಿದ್ದು, ಇದರಲ್ಲಿ ರೂ. 21.53ಲಕ್ಷಗಳನ್ನು ಖರ್ಚು ಮಾಡಲಾಗಿದೆ.

ವಿಷಯ: -ಸ್ಟಾಂಪ್ ಶುಲ್ಕದ ಮನ್ನಾ ಕುರಿತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 129(343)

ಶ್ರೀಮತಿ ಮೋಟಮ್ಮ (ಮೂಡಿಗೆರೆ)

ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?